ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

## ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

### ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು 01

ಸಂಖ್ಯೆ: ಸ.ಶಿ.ಅ/ಒ.ಒ.ಎಸ್.ಸಿ/ಚಿ.ಅಂ/01/11-12 ದಿನಾಂಕ: 18.04.2011

**ಮುದ್ರಣ ಕಾರ್ಯಕ್ಕೆ ಕೊಟೇಶನ್ ಆಹ್ವಾನ**

ಸರ್ವ ಶಿಕ್ಷಣ ಅಭಿಯಾನದ ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರದಡಿಯಲ್ಲಿ 07 ರಿಂದ 09 ವರ್ಷ ವಯೋಮಾನದಲ್ಲಿರುವ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸಂಬಂಧಿಸಿದಂತೆ ಕನ್ನಡ ಭಾಷೆಯಲ್ಲಿ ರಚಿತವಾದ ಸಾಹಿತ್ಯ – ಚಿಣ್ಣರ ಅಂಗಳ ಬೋಧಕರ ಕೈಪಿಡಿ ಹಾಗೂ ಅಭ್ಯಾಸ ಪುಸ್ತಕಗಳನ್ನು 2011-12ನೇ ಸಾಲಿನಲ್ಲಿ ಮುದ್ರಿಸಿ, ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಿಗೆ ವಿತರಿಸಲು ದರಪಟ್ಟಿಯನ್ನು ಈ ಕಛೇರಿಯೊಂದಿಗೆ ಎಂಪ್ಯಾನಲ್ ಆಗಿರುವ ಅರ್ಹ ಮುದ್ರಣ ಸಂಸ್ಥೆಗಳಿಂದ ಈ ಮೂಲಕ ಆಹ್ವಾನಿಸಲಾಗಿದೆ.

| **1. ಚಿಣ್ಣರ ಅಂಗಳ – 1 (ಕನ್ನಡ ಮಾಧ್ಯಮ) ಬೋಧಕರ ಕೈಪಿಡಿ** | |
|---|---|
| ಅಂದಾಜು ಪುಟಗಳ ಸಂಖ್ಯೆ<br><br>ಕಾಗದದ ಅಳತೆ | 346<br>ಹೊರಪುಟಗಳು 04<br>ಹೊರಪುಟಗಳನ್ನು ಮಾತ್ರ ಬಹುವರ್ಣದಲ್ಲಿ ಮುದ್ರಿಸಬೇಕು<br>ಒಳಪುಟಗಳನ್ನು ಕಪ್ಪು ಬಿಳುಪು ಬಣ್ಣಗಳಲ್ಲಿ ಮುದ್ರಿಸಬೇಕು<br>21 X 29 cm |
| ಮುದ್ರಿಸಬೇಕಾದ ಪ್ರತಿಗಳು | 3000 |
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 70 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಪರ್‌ಫೆಕ್ಟ್ ಬೈಂಡಿಂಗ್ |
| **2. ಚಿಣ್ಣರ ಅಂಗಳ – 1 – ಅಭ್ಯಾಸ ಪುಸ್ತಕ (ಕನ್ನಡ ಮತ್ತು ಆಂಗ್ಲ ಭಾಷೆ ಸೇರಿ ಒಂದು ಪಠ್ಯ ಸಹಿತ ಅಭ್ಯಾಸ ಪುಸ್ತಕ)** | |
| ಅಂದಾಜು ಪುಟಗಳ ಸಂಖ್ಯೆ<br><br>ಕಾಗದದ ಅಳತೆ | 136<br>ಹೊರಪುಟಗಳು 04<br>ಒಳಪುಟಗಳು ಹಾಗೂ ಹೊರಪುಟಗಳನ್ನು ಬಹುವರ್ಣದಲ್ಲಿ ಮುದ್ರಿಸಬೇಕು<br>21 X 29 cm |
| ಮುದ್ರಿಸಬೇಕಾದ ಅಂದಾಜು ಪ್ರತಿಗಳು | 20000 |
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 80 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಪರ್‌ಫೆಕ್ಟ್ ಬೈಂಡಿಂಗ್ |

| **3. ಚಿಣ್ಣರ ಅಂಗಳ – 1 – (ಕನ್ನಡ ಮಾಧ್ಯಮ) ಅಭ್ಯಾಸ ಪುಸ್ತಕ (ಗಣಿತ ಮತ್ತು ಪರಿಸರ ಅಧ್ಯಯನ ಸೇರಿ ಒಂದು ಪಠ್ಯ ಸಹಿತ ಅಭ್ಯಾಸ ಪುಸ್ತಕ)** | |
|---|---|
| ಅಂದಾಜು ಪುಟಗಳ ಸಂಖ್ಯೆ<br><br>ಕಾಗದದ ಅಳತೆ | 154<br>ಹೊರಪುಟಗಳು 04<br>ಒಳಪುಟಗಳು ಹಾಗೂ ಹೊರಪುಟಗಳನ್ನು ಬಹುವರ್ಣದಲ್ಲಿ ಮುದ್ರಿಸಬೇಕು<br>21 X 29 cm |
| ಮುದ್ರಿಸಬೇಕಾದ ಅಂದಾಜು ಪ್ರತಿಗಳು | 20000 |
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 80 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಫರ್‌ಫೆಕ್ಟ್ ಬೈಂಡಿಂಗ್ |

ಸದರಿ ಮುದ್ರಣಕ್ಕೆ ಮತ್ತು ಜಿಲ್ಲಾ ಕೇಂದ್ರಗಳಿಗೆ ಪೂರೈಸಲು ತಗಲುವ ಒಟ್ಟು ಮೊತ್ತವನ್ನು ಎಲ್ಲಾ ತೆರಿಗೆಗಳು ಒಳಗೊಂಡಂತೆ ಈ ಕಛೇರಿಗೆ **ದಿನಾಂಕ: 28.04.11 ಸಂಜೆ 3.00** ಗಂಟೆಯೊಳಗೆ ತಲುಪುವಂತೆ ಸಲ್ಲಿಸತಕ್ಕದ್ದು. ದರವನ್ನು ಬೋಧಕರ ಕೈಪಿಡಿ ಹಾಗೂ ಅಭ್ಯಾಸ ಪುಸ್ತಕಗಳಿಗೆ ಪ್ರತ್ಯೇಕವಾಗಿ ಪುಸ್ತಕಗಳ ಪ್ರತಿ ಪುಟಕ್ಕೆ ಅನ್ವಯಿಸುವಂತೆ ನೀಡಬೇಕು. ದರಗಳು ಕನಿಷ್ಠ 90 ದಿನಗಳ ಅವಧಿಗೆ ಚಾಲ್ತಿಯಲ್ಲಿರಬೇಕು. ಮುದ್ರಣ ಮತ್ತು ಪೂರೈಕೆಯನ್ನು ಕಾರ್ಯಾದೇಶ ನೀಡಿದ 15 ದಿನಗಳೊಳಗೆ ಪೂರ್ಣಗೊಳಿಸಿ ಸೂಚಿತ ಸ್ಥಳಗಳಿಗೆ ಹಂಚತಕ್ಕದ್ದು, ಪ್ರತಿ ದಿನದ ವಿಳಂಬಕ್ಕೆ 0.50 % ನಂತೆ ದಂಡ ವಿಧಿಸಲಾಗುತ್ತದೆ. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುತ್ತದೆ. ನಮೂದಿಸಿರುವ ದರವು ಮುದ್ರಣ ವೆಚ್ಚ, ಸಾಗಾಣಿಕೆ, ಡಿ.ಟಿ.ಪಿ, ಟ್ಯಾಕ್ಸ್ ಎಲ್ಲಾ ಒಳಗೊಂಡಿರುವಂತಿರಬೇಕು.

ಪ್ರತಿ ಜಿಲ್ಲೆಗೆ ಪೂರೈಸಬೇಕಾದ ಪುಸ್ತಕಗಳ ವಿವರವನ್ನು ನಂತರ ನೀಡಲಾಗುವುದು. ಚಿಣ್ಣರ ಅಂಗಳ–೧ ಬೋಧಕರ ಕೈಪಿಡಿ ಹಾಗೂ ಅಭ್ಯಾಸ ಪುಸ್ತಕಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಲಿಖಿತ ರೂಪದಲ್ಲಿ ಈ ಕಛೇರಿಯಿಂದ ಮುದ್ರಕರಿಗೆ ನೀಡಲಾಗುವುದು. ಅಭ್ಯಾಸ ಪುಸ್ತಕದಲ್ಲಿರುವ ಬಹುವರ್ಣದ ಚಿತ್ರಗಳನ್ನು ಮಾತ್ರ ಈ ಕಛೇರಿಯಿಂದ ಸಾಫ್ಟ್ ಪ್ರತಿ ನೀಡಲಾಗುವುದು. **ಸಾಹಿತ್ಯದ ಡಿ.ಟಿ.ಪಿಯನ್ನು ಮುದ್ರಕರು ಮಾಡಬೇಕು. ಡಿ.ಟಿ.ಪಿ ಪ್ರತಿಗಳು ಈ ಕಛೇರಿಯಿಂದ 2 ರಿಂದ 3 ಬಾರಿ ಪರಿಷ್ಕರಿಸಿ, ಅಂತಿಮ ಪ್ರತಿ ಅನುಮೋದನೆಯಾದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸಬೇಕು.** ಸಂಸ್ಥೆಗಳ ಬಿಲ್ಲುಗಳ ಸಂಗಡ ಮುದ್ರಣ ಕಾರ್ಯದ ಡಿ.ಟಿ.ಪಿ ವಿವರವನ್ನು ಸಿ.ಡಿ ರೂಪದಲ್ಲಿ ಕಛೇರಿಗೆ ಸಲ್ಲಿಸುವುದು ಕಡ್ಡಾಯ. ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್ (ಒಳಪುಟ ಹಾಗೂ ರಕ್ಷಾ ಪುಟ) ಸಂಸ್ಥೆ ದೃಢೀಕರಿಸಿ ಕೊಟೇಷನ್ ಸಂಗಡ ಸಲ್ಲಿಸುವುದು ಕಡ್ಡಾಯ. ಪುಸ್ತಕಗಳ ಪುಟಗಳ ಸಂಖ್ಯೆ ಕಡಿಮೆ/ಹೆಚ್ಚಾದಲ್ಲಿ Pro-rata ಆಧಾರದಲ್ಲಿ ಕಡಿಮೆ/ ಹೆಚ್ಚುವರಿ ಹಣ ಈ ಕಛೇರಿಯಿಂದ ನೀಡಲಾಗುವುದು. EMD ಮೊತ್ತವನ್ನು ರೂ. 23,600/– ಕೊಟೇಶನ್ ಸಂಗಡ ಬ್ಯಾಂಕ್ ಹುಂಡಿ ರೂಪದಲ್ಲಿ ಸಲ್ಲಿಸುವುದು ಕಡ್ಡಾಯ. ಆಯ್ಕೆಯಾದ ಸಂಸ್ಥೆಯವರು ಕೊಟೇಶನ್ ಒಟ್ಟು ಮೌಲ್ಯದ ಶೇಕಡ 5 ರಂತೆ ಭದ್ರತಾ ಠೇವಣಿ ಸಂಬಂಧ ಮೊತ್ತವನ್ನು ಬ್ಯಾಂಕ್ ಹುಂಡಿ ರೂಪದಲ್ಲಿ ಸಲ್ಲಿಸಬೇಕು ಹಾಗೂ ನಿಗದಿತ ನಮೂನೆಯಲ್ಲಿ ಕರಾರು ಪತ್ರವನ್ನು ರೂ 50/– ಸ್ಟಾಂಪ್ ಕಾಗದದಲ್ಲಿ ಸಹಿ ಮಾಡಿ ನಿಗದಿತ ಅವಧಿಯೊಳಗೆ ಸಲ್ಲಿಸಬೇಕು.

ದರಪಟ್ಟಿಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ಅದರ ಮೇಲೆ **ಚಿಣ್ಣರ ಅಂಗಳ – 1 (ಕನ್ನಡ ಮಾಧ್ಯಮ) ಬೋಧಕರ ಕೈಪಿಡಿ ಹಾಗೂ ಅಭ್ಯಾಸ ಪುಸ್ತಕಗಳ ಮುದ್ರಣ ಮತ್ತು ವಿತರಣೆಗೆ ಸಂಬಂಧಿಸಿದಂತೆ** ಎಂದು ಬರೆದು ಕೆಳ ಸಹಿ ಮಾಡಿರುವವರಿಗೆ ಸಲ್ಲಿಸತಕ್ಕದ್ದು. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಅಂಗೀಕರಿಸುವುದಿಲ್ಲ. ಯಾವುದೇ ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ